ರಾಜ್ಯದಲ್ಲಿರುವ ಪುರಸಭೆಗಳ ಬಗ್ಗೆ

4738 - ಶ್ರೀ ಬಚ್ಚೇಗೌಡ ಬಿ.ಎನ್ (ಹೊಸಕೋಟೆ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ಪುರಸಭೆಗಳ ಸಂಖ್ಯೆ ಎಷ್ಟು? ಇವು ಆರ್ಥಿಕ ಮುಗ್ಗಟ್ಟಿನಿಂದ ಸೊರಗುತ್ತಿರುವುದು ಸರ್ಕಾರಾದ ಗಮನಕ್ಕೆ ಬಂದಿದೆಯೇ?*

ಆ) *ಪುರಸಭೆಗಳ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ಅಭಿವೃದ್ಧಿಪಡಿಸಲು ಸರ್ಕಾರ ಮುಂದೆ ಹಣ ಒದಗಿಸಲು ಏನಾದರೂ ಪ್ರಸ್ತಾವನೆ ಇದೆಯೆ?*

ಇ) *ಪೌರ ಸಂಸ್ಥೆಗಳ ಅಭಿವೃದ್ಧಿಗೆ ರೂ. 50 ಲಕ್ಷಗಳನ್ನು ಕೊಡುವುದಾಗಿ ಮತ್ತು ಈ ಹಣ ಕಾಸಿಗೆ ಹೂಡ್ಕೋ ಸಂಸ್ಥೆಯಿಂದ ಸಾಲ ಪಡೆಯುವ ಯೋಜನೆ ಯಾವ ಹಂತದಲ್ಲಿದೆ?*

ಈ) *ಈ ರೂ. 50 ಲಕ್ಷಗಳು ಎಂದು ಬಿಡುಗಡೆ ಮಾಡಲಾಗುವುದು?*

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 82 ಪುರಸಭೆಗಳು ಇವೆ. ಇವುಗಳಲ್ಲಿ ಕೆಲವು ಪುರಸಭೆಗಳು ಆರ್ಥಿಕ ಮುಗ್ಗಟ್ಟು ಹೊಂದಿವೆ.

ಆ) ಇದೆ.

ಇ) ರಾಜ್ಯದಲ್ಲಿರುವ ನಗರ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಸಲುವಾಗಿ ಹುಡ್ಕೋ ಸಂಸ್ಥೆಯಿಂದ ರೂ.100 ಕೋಟಿಗಳನ್ನು ಸಾಲದ ರೂಪವಾಗಿ ಪಡೆಯಲು ಉದ್ದೇಶಿಸಿ ಒಪ್ಪಂದ ಮಾಡಿಕೊಳ್ಳಲಾಗಿದೆ. ಆದರಂತೆ ಈಗಾಗಲೇ 123 ಸ್ಥಳೀಯ ಸಂಸ್ಥೆಗಳ ಕಾಮಗಾರಿಗಳಿಗೆ ಮಂಜೂರಾತಿಯನ್ನು ನೀಡಲಾಗಿದೆ.

ಈ) ಸದ್ಯದಲ್ಲಿಯೇ.

ರಾಜ್ಯದಲ್ಲಿ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯು ಮುಗಿಸಿರುವ ಯೋಜನೆಗಳ ಸಂಖ್ಯೆ

4739 - ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಪಟ್ಟಣ ಪ್ರದೇಶಗಳಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯಿಂದ ಇದುವರೆವಿಗೆ ಮುಗಿಸಿ ನೀರು ಒದಗಿಸಿರುವ ಪಟ್ಟಣಗಳ ಸಂಖ್ಯೆ ಎಷ್ಟು? ಅದಕ್ಕೆ ತಗಲಿದ ವೆಚ್ಚ ಎಷ್ಟು?*

ಆ) *ಈ ಹಾಲಿ ಮಂಡಲಿ ವತಿಯಿಂದ ಎಷ್ಟು ಯೋಜನೆಗಳ ಕಾರ್ಯ ನಡೆಯುತ್ತಿದೆ? ಅವು ಯಾವ ಹಂತದಲ್ಲಿದೆ? ಇದುವರೆವಿಗೆ ಈ ಯೋಜನೆಗಳಿಗೆ ಒದಗಿಸಿರುವ ಹಣ ಎಷ್ಟು?*

ಇ) *2000-2001ರಲ್ಲಿ ಮಂಡಲಿಯಿಂದ ತೆಗೆದುಕೊಂಡಿರುವ ಹೊಸ ಯೋಜನೆಗಳು ಯಾವುವು? ಅವುಗಳಿಗೆ ಸರ್ಕಾರದ ಮಂಜೂರಾತಿ ದೊರೆತಿದೆಯೆ?*

ಈ) *ಈ ಯೋಜನೆಗೆ ಯಾವ ಆರ್ಥಿಕ ಸಂಸ್ಥೆಗಳಿಂದ ಸಹಾಯಧನ ಪಡೆಯಲಾಗಿದೆ. ಒಟ್ಟು ಅಂದಾಜು ಎಷ್ಟು?*

ಉ) *ಈ ಹಾಲಿ ಪಟ್ಟಣ ಪ್ರದೇಶಗಳಲ್ಲಿ ಪ್ರತಿ ನಾಗರೀಕನಿಗೆ ಎಷ್ಟು ಲೀಟರ್ ನೀರು ಕೊಡಲಾಗಿದೆ. ಇದಕ್ಕೆ ತಗಲುವ ವೆಚ್ಚ ಎಷ್ಟು?*

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ ವ್ಯಾಪ್ತಿಗೆ 208 ನಗರ ಪ್ರದೇಶಗಳು ಬರುತ್ತದೆ. ಈ ನಗರಗಳ ಪೈಕಿ 187 ನಗರ/ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಯೋಜನೆಗಳನ್ನು ಚಾಲ್ತಿಗೊಳಿಸಿರುತ್ತದೆ. ಇವುಗಳ ಅಂದಾಜು ವೆಚ್ಚ ರೂ. 669.25 ಕೋಟಿಗಳು.

ಆ) ಮಂಡಲಿ ವತಿಯಿಂದ 57 ನೀರು ಸರಬರಾಜು ಯೋಜನೆಗಳ ಕಾರ್ಯ ನಡೆಯುತ್ತಿದೆ. ಯೋಜನೆಗಳು ಪ್ರಗತಿಯಲ್ಲಿವೆ. 2000-01ನೇ ಸಾಲಿನಲ್ಲಿ 19 ಯೋಜನೆಗಳನ್ನು ಚಾಲ್ತಿ ಗೊಳಿಸುವ ಗುರಿ ಹೊಂದಲಾಗಿದೆ. ಉಳಿದ ಯೋಜನೆಗಳನ್ನು ಮುಂದಿನ 2-3 ವರ್ಷಗಳಲ್ಲಿ ಚಾಲ್ತಿಗೊಳಿಸಲಾಗುವುದು. ಇದುವರೆವಿಗೆ ಈ ಯೋಜನೆಗಳಿಗೆ ರೂ. 140.87 ಕೋಟಿ ಒದಗಿಸಲಾಗಿದೆ.

ಇ) 2000-01ನೇ ಸಾಲಿನಲ್ಲಿ 19 ಹೊಸ ಯೋಜನೆಗಳಿಗೆ ರಾಜ್ಯ ಸರ್ಕಾರದಿಂದ ಅನುಮತಿ ನೀಡಿರುತ್ತದೆ (ವಿವರ ಲಗತ್ತಿಸಲಾಗಿದೆ)

ಈ) ಈ ಯೋಜನೆಗಳಿಗೆ ಹುಡ್ಕೋ ಹಾಗೂ ಜೀವ ವಿಮಾ ನಿಗಮದಿಂದ ಸಾಲವನ್ನು ಪಡೆಯಲು ಉದ್ದೇಶಿಸಲಾಗಿದ್ದು, ಯೋಜನೆಗಳ ಅಂದಾಜು ಮೊತ್ತ ರೂ. 261.80 ಕೋಟಿಗಳು.

ಉ) ಈಗ ಹಾಲಿ ಜನಸಂಖ್ಯೆ 20,000ರ ವರೆಗೆ ಇರುವ ಪಟ್ಟಣಗಳಲ್ಲಿ 70 ಎಲ್.ಪಿ.ಸಿ.ಡಿ. ಜನಸಂಖ್ಯೆ 1 ಲಕ್ಷಕ್ಕಿಂತ ಕಡಿಮೆ ಇರುವ ಪಟ್ಟಣಗಳಲ್ಲಿ 100 ಎಲ್.ಪಿ.ಸಿ.ಡಿ. ಹಾಗೂ ಜನಸಂಖ್ಯೆ 1 ಲಕ್ಷಕ್ಕಿಂತ ಹೆಚ್ಚಿಗೆ ಇರುವ ಪಟ್ಟಣಗಳಲ್ಲಿ 135 ಎಲ್.ಪಿ.ಸಿ.ಡಿ. ತಲಾವಾರು ನೀರು ಒದಗಿಸಲಾಗುತ್ತಿದೆ. ಇದಕ್ಕೆ ತಗುಲಿದ ವೆಚ್ಚ ರೂ.669.25 ಕೋಟಿಗಳು.

ANNEXURE - 1

New Schemes Sanctioned During the year 2000-2001

(Rs. in Lakhs)

Sl. No.	Name of Scheme/ Town	Estimated Cost	Funding Pattern GOK	GOI	HUDCO	LIC	Local Bodies
1.	Deodurga	289.50	170.02	119.48	-	-	-
2.	Navalgund	62.30	43.35	18.95	-	-	-
3.	Kunigal	177.48	88.74	-	-	88.74	-
4	Kollegal	919.12	459.56	-	459.56	-	-
5	Bhatkal	355.52	177.76	-	-	177.76	-
6	Gadag-Betegeri	1116.00	260.36	-	74.04	-	111.60
7	Mulabagal	335.03	167.52	-	-	167.51	-
8	Ron	728.16	728.16	-	-	-	-
9	Sidlaghatta	330.00	165.00	-	-	165.00	-
10	Hubli-Dharwad	4448.00	1037.72	-	2965.48	-	444.80
11	Mudigere	340.00	170.00	-	-	170.00	-
12	Terdal	432.28	432.28	-	-	-	-
13	Chitradurga	7950.00	1854.73	-	5300.27	-	795.00
14.	Talikote	134.55	67.28	-	-	67.27	-
15.	Koppa	110.00	60.92	49.08	-	-	-
16.	Bagepalli	159.00	90.30	68.70	-	-	-
17.	Veerajpet	260.00	153.37	106.63	-	-	-
18.	Maddur	2236.00	1118.00	-	118.00	-	-
19.	Gulbarga	5797.86	1352.65	-	3865.43	-	579.78
	Total	**26180.90**	**8597.72**	**362.84**	**14452.78**	**836.28**	**1931.18**